# KANNADA ( CODE NO. 115)
# CLASS XII
# 2025-2026
# SAMPLE QUESTION PAPER

**3 Hours** **Max. Marks : 80**

**ವಿಷಯ : ಕನ್ನಡ ( CODE NO. 115)**

**ತರಗತಿ : 12**

**2025–2026**

**ಮಾದರಿ ಪ್ರಶ್ನೆಪತ್ರಿಕೆ**

**ಸಮಯ : 3 ಗಂಟೆ** **ಅಂಕಗಳು : 80**

---

**ಸೂಚನೆಗಳು :**

- ಪ್ರಶ್ನೆ ಪತ್ರಿಕೆಯು **A & B** ಭಾಗಗಳನ್ನು ಮತ್ತು **A, B, C** ಮತ್ತು **D** ಎಂಬ 4 ವಿಭಾಗಗಳನ್ನು ಒಳಗೊಂಡಿರುತ್ತದೆ. ಒಟ್ಟು 34 ಬಹು ಆಯ್ಕೆಯ ಪ್ರಶ್ನೆಗಳಿರುತ್ತವೆ. ಎಲ್ಲ ಪ್ರಶ್ನೆಗಳಿಗೆ ಉತ್ತರಿಸಬೇಕು.
- ಭಾಗ– **A**,ಯ ವಿಭಾಗ **A** ದಲ್ಲಿ ವಾಚನ ಮತ್ತು ಗ್ರಹಿಕಾ ಕೌಶಲ್ಯದಲ್ಲಿ 2 ಗದ್ಯಾಂಶಗಳನ್ನು ಕೊಡಲಾಗಿದೆ.
- ವಿಭಾಗ – **B**, ಅನ್ವಯಿಕ ವ್ಯಾಕರಣ ವಿಭಾಗದಲ್ಲಿ 16 ಅಂಕಗಳ 14 ಪ್ರಶ್ನೆಗಳಿವೆ ಅಲ್ಲಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಬೇಕು.
- ವಿಭಾಗ - **C** ದಲ್ಲಿಯ ಎಲ್ಲ ಪ್ರಶ್ನೆಗಳಿಗೆ ಉತ್ತರಿಸಬೇಕು.
- ಭಾಗ - **B** ದ ವಿಭಾಗ - **D** ದಲ್ಲಿಯ ಪ್ರಶ್ನೆಗಳಿಗೆ ಅಲ್ಲಿ ಕೊಟ್ಟಿರುವ ಸೂಚನೆಯಂತೆ ಉತ್ತರಿಸಬೇಕು.

---

## PART A Section A

**ವಾಚನ ಮತ್ತು ಗ್ರಹಿಕಾ ಕೌಶಲ : ಅಪರಿಚಿತ ಗದ್ಯ ಅಂಕಗಳು - 10**

**ಪ್ರಶ್ನೆ 1. ಈ ಕೆಳಗಿನ ಪರಿಚ್ಛೇದವನ್ನು ಓದಿಕೊಂಡು ಪರಿಚ್ಛೇದದ ಕೆಳಗೆ ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.**

**5 X 1 = 5**

ಸಾಮಾನ್ಯವಾಗಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಆಗುತ್ತಿರುವ ಹೊಸ ಆವಿಷ್ಕಾರಗಳ ಮತ್ತು ಬದಲಾವಣೆಗಳ ಪರಿಚಯ ಕಾರ್ಮಿಕನಿಗೆ ಆಗುವುದಿಲ್ಲ. ನಮ್ಮ ವ್ಯವಸ್ಥೆ ಇರುವದೇ ಹೀಗೆ. ಹೊಸ ಅನ್ವೇಷಣೆಯ ಅಥವಾ ಬದಲಾವಣೆಯ ಮಾಹಿತಿ ತಿಳಿಸುವ ಸಾಹಿತ್ಯವನ್ನು ನಾವು ತಜ್ಞರಾದವರಿಗೆ ಮಾತ್ರ ಕೊಡುತ್ತೇವೆ. ಅವರು ಮಾತ್ರ ಅದರ ಬಗ್ಗೆ ಆಲೋಚಿಸುತ್ತಾರೆ. ಅವರು ಹೇಳಿದ ಮಾರ್ಪಾಟನ್ನಷ್ಟೇ ಕಾರ್ಮಿಕ ಯಾಂತ್ರಿಕವಾಗಿ ಮಾಡುತ್ತಾನೆ. ಅದಕ್ಕಿಂತ ಹೆಚ್ಚು ಯೋಚಿಸಲು ಅವನಿಗೆ ಸಾಧ್ಯವಿಲ್ಲ. ಏಕೆಂದರೆ ಆ ಒಂದು ಬದಲಾವಣೆಯ ಹಿನ್ನೆಲೆಯನ್ನು ತಿಳಿಸುವ ತಂತ್ರಜ್ಞಾನದ ವಿವರ ಅವನಿಗರ್ಥವಾಗುವ ಭಾಷೆಯಲ್ಲಿ ಇರುವುದಿಲ್ಲ. ಇದು ಹೀಗೇ ಮುಂದುವರಿಯುತ್ತಿರುವುದರ ಅರ್ಥವೇನು? ಕೆಲಸ ಮಾಡುತ್ತಾ ಹೋದಂತೆ ಕಾರ್ಮಿಕನ ತಿಳುವಳಿಕೆ ಜಾಸ್ತಿಯಾಗುತ್ತಾ ಹೋಗುತ್ತದೆ. ಅವನಿಗೆ ಪೂರಕವಾದ ಸಾಹಿತ್ಯವನ್ನೂ ಒದಗಿಸಿದರೆ ಅದರಿಂದ ಅವನ ಸೃಜನಾತ್ಮಕತೆ ಹೆಚ್ಚಾಗುತ್ತದೆ. ಇದರ ನೆರವಿನಿಂದ ಆತ ಕಾರ್ಯವಿಧಾನದಲ್ಲಿ ಕೆಲವೇ ಬದಲಾವಣೆಗಳನ್ನು ಮಾಡಿಕೊಂಡು ಇನ್ನೂ ಉತ್ತಮ ಗುಣಮಟ್ಟದಲ್ಲಿ ವಸ್ತುವನ್ನು ಉತ್ಪಾದಿಸಬಹುದು ಅಥವಾ ಉತ್ಪಾದನೆಯ ವೆಚ್ಚವನ್ನು ತಗ್ಗಿಸುವಂತಹ ಉಪಯುಕ್ತ ಸಲಹೆಯನ್ನೂ ಕೊಡಬಹುದು. ಒಟ್ಟಿನಲ್ಲಿ ಕಾರ್ಮಿಕನ ಈ ಅನುಭವ ಜ್ಞಾನದ ಬಳಕೆಗೆ ಇರುವ ಬಹುದೊಡ್ಡ ತೊಡಕೆಂದರೆ ವಿದೇಶೀ ಭಾಷೆಯೊಂದರ ಮಾಧ್ಯಮದ ಮೂಲಕ ನಮ್ಮ ವ್ಯವಹಾರಗಳೆಲ್ಲವೂ ನಡೆಯುತ್ತಿರುವುದು. ನಾವು ಬದಲಾಗಬೇಕಾದರೆ ಮೊದಲು ಈ ಭಾಷಾ ವ್ಯವಸ್ಥೆಯನ್ನು ಸರಿಪಡಿಸಬೇಕಾಗಿದೆ. ಹಾಗಿದ್ದಾಗ ಮಾತ್ರ ನಮ್ಮ ನೆಲ, ನಮ್ಮ ನೆಲಕ್ಕೆ ಒಗ್ಗುವಂತೆ ತಂತ್ರಜ್ಞಾನ ಕೇತ್ರದಲ್ಲಿ ನಮಗೆ ಅಗತ್ಯವಿರುವಂಥವುಗಳನ್ನು ನಾವೇ ಸಿದ್ಧಪಡಿಸಿಕೊಂಡು ಸ್ವಾವಲಂಬಿಗಳಾಗಬಹುದು.

**ಪ್ರಶ್ನೆಗಳು :**

**I.ತಂತ್ರಜ್ಞಾನದಲ್ಲಿ ಉಂಟಾಗುವ ಹೊಸ ಆವಿಷ್ಕಾರಗಳ ಪರಿಚಯ ಕಾರ್ಮಿಕನಿಗೆ ಸಾಮಾನ್ಯವಾಗಿ ಏಕೆ ಉಂಟಾಗದು?**

A. ತನ್ನ ಕೆಲಸಕ್ಕಿಂತ ಹೆಚ್ಚು ಯೋಚಿಸಲು ಅವನಿಗೆ ಸಾಧ್ಯವಿಲ್ಲ.

B. ಹೊಸ ಅನ್ವೇಷಣೆಯ ಅಥವಾ ಬದಲಾವಣೆಯ ಮಾಹಿತಿ ತಿಳಿಸುವ ಸಾಹಿತ್ಯವನ್ನು ನಾವು ತಜ್ಞರಾದವರಿಗೆ ಮಾತ್ರ ಕೊಡುತ್ತೇವೆ.

C. ಬದಲಾವಣೆಯ ಹಿನ್ನೆಲೆಯನ್ನು ತಿಳಿಸುವ ತಂತ್ರಜ್ಞಾನದ ವಿವರ ಅವನಿಗರ್ಥವಾಗುವ ಭಾಷೆಯಲ್ಲಿ ಇರುವುದಿಲ್ಲ.

D. ಹೊಸ ಆವಿಷ್ಕಾರಗಳ ಪರಿಚಯ ಕಾರ್ಮಿಕನಿಗೆ ಅಗತ್ಯವೆಂದು ಯಾರಿಗೂ ಅನಿಸುತ್ತಿಲ್ಲ.

**II.ತಜ್ಞರು ಹೇಳಿದಷ್ಟನ್ನೆ ಕಾರ್ಮಿಕ ಮಾಡಲು ಕಾರಣವೇನು?**

A. ಅವನಿಗೆ ಪೂರಕವಾದ ಸಾಹಿತ್ಯವನ್ನು ಒದಗಿಸುತ್ತಿಲ್ಲ.

B. ಕಾರ್ಮಿಕನಿಗೆ ಅದರಲ್ಲಿ ಆಸಕ್ತಿಯಿಲ್ಲ.

C. ಬದಲಾವಣೆಯ ಹಿನ್ನೆಲೆಯನ್ನು ತಿಳಿಸುವ ತಂತ್ರಜ್ಞಾನದ ವಿವರ ಅವನಿಗರ್ಥವಾಗುವ ಭಾಷೆಯಲ್ಲಿ ಇರುವುದಿಲ್ಲ.

D. ಹೊಸ ಅನ್ವೇಷಣೆಯ ಅಥವಾ ಬದಲಾವಣೆಯ ಮಾಹಿತಿ ತಿಳಿಸುವ ಸಾಹಿತ್ಯವನ್ನು ನಾವು ತಜ್ಞರಾದವರಿಗೆ ಮಾತ್ರ ಕೊಡುತ್ತೇವೆ.

**III.ತಂತ್ರಜ್ಞಾನದ ಬದಲಾವಣೆ ಕಾರ್ಮಿಕನಿಗೆ ಏಕೆ ತಿಳಿಯುವುದಿಲ್ಲ?**

A. ಬದಲಾವಣೆಯ ಹಿನ್ನೆಲೆಯನ್ನು ತಿಳಿಸುವ ತಂತ್ರಜ್ಞಾನದ ವಿವರ ಅವನಿಗರ್ಥವಾಗುವ ಭಾಷೆಯಲ್ಲಿ ಇರುವುದಿಲ್ಲ.

B. ನಮ್ಮ ವ್ಯವಸ್ಥೆ ಇರುವುದೇ ಹೀಗೆ.

C. ಏಕೆಂದರೆ ಹೇಳಿದ ಮಾರ್ಪಾಟನ್ನಷ್ಟೇ ಕಾರ್ಮಿಕ ಯಾಂತ್ರಿಕವಾಗಿ ಮಾಡುತ್ತಾನೆ.

D. ತಜ್ಞರು ತಿಳಿಸಿಕೊಟ್ಟಿರುವುದಿಲ್ಲ.

**IV.ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸಲು ಕಾರ್ಮಿಕನಿಗೆ ಹೇಗೆ ನೆರವಾಗಬಹುದು?**

A. ಕೆಲಸ ಮಾಡುತ್ತಾ ಹೋದಂತೆ ಕಾರ್ಮಿಕನ ತಿಳುವಳಿಕೆ ಜಾಸ್ತಿಯಾಗುತ್ತಾ ಹೋಗುತ್ತದೆ.

B. ಕಾರ್ಮಿಕನಿಗೆ ಪೂರಕವಾದ ಸಾಹಿತ್ಯವನ್ನು ಒದಗಿಸಿದರೆ ಅದರಿಂದ ಅವನ ಸೃಜನಾತ್ಮಕತೆ ಹೆಚ್ಚಾಗಿ, ಉತ್ತಮ ಗುಣಮಟ್ಟದ ವಸ್ತುಗಳನ್ನು ಉತ್ಪಾದಿಸಲು ಅನುಕೂಲವಾಗುತ್ತದೆ.

C. ಹೊಸ ಅನ್ವೇಷಣೆಯ ಅಥವಾ ಬದಲಾವಣೆಯ ಮಾಹಿತಿ ತಿಳಿಸುವ ಸಾಹಿತ್ಯವನ್ನು ಕಾರ್ಮಿಕನಿಗೆ ಕೊಡಬಹುದು.

D. ತಜ್ಞರೇ ಕಾರ್ಮಿಕನ ಕೆಲಸ ಮಾಡಿಕೊಟ್ಟು ನೆರವಾಗಬಹುದು.

**V.ವಿದೇಶ ಭಾಷೆಯ ಬಳಕೆಯಿಂದ ಕಾರ್ಮಿಕನಿಗಾಗುವ ತೊಂದರೆಯೇನು?**

A. ಕಾರ್ಮಿಕ ವಿದೇಶೀ ಭಾಷೆಯನ್ನು ಕಲಿಯಬಹುದು.

B. ಬದಲಾವಣೆಯ ಹಿನ್ನೆಲೆಯನ್ನು ತಿಳಿಸುವ ತಂತ್ರಜ್ಞಾನದ ವಿವರ ಅವನಿಗರ್ಥವಾಗುವದಿಲ್ಲ.

C. ತಜ್ಞರು ಹೇಳಿದ ಮಾರ್ಪಾಟನ್ನಷ್ಟೇ ಕಾರ್ಮಿಕ ಯಾಂತ್ರಿಕವಾಗಿ ಮಾಡುತ್ತಾನೆ.

D. ಕಾರ್ಮಿಕನಿಗೆ ತನ್ನ ಉದ್ಯೋಗವನ್ನು ಏಕಾಗ್ರತೆ ಮತ್ತು ಶ್ರದ್ಧೆಯಿಂದ ಮಾಡಲು ಆಗುವುದಿಲ್ಲ.

**ಪ್ರಶ್ನೆ 2. ಈ ಕೆಳಗಿನ ಪರಿಚ್ಛೇದವನ್ನು ಓದಿಕೊಂಡು ಪರಿಚ್ಛೇದದ ಕೆಳಗೆ ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.**

**5 X 1= 5**

ಪ್ರಾಚೀನ ಕಾಲದಲ್ಲಿ ಧರ್ಮವೇ ಭಾರತದ ನೆಲೆಗಟ್ಟಾಗಿ ಅದಕ್ಕೆ ತಕ್ಕಂತೆ ಜೀವನ ರೂಪುಗೊಂಡಿತ್ತು. ಅತಿ ಪ್ರಾಚೀನ ಕಾಲದಿಂದಲೇ ಆರ್ಯ ಜನಾಂಗ ಭಾರತದಲ್ಲಿ ಮೊದಲೇ ನೆಲೆಸಿದ ಮೂಲ ನಿವಾಸಿಗಳೊಡನೆ ಸಮ್ಮಿಲನಗೊಂಡು, ಧಾರ್ಮಿಕ–ಸಾಂಸ್ಕೃತಿಕ ಅಂಗಗಳಲ್ಲಿ ಒಂದರೊಡನೊಂದು ಹಾಸುಹೊಕ್ಕಾಗಿ ಸೇರಿಕೊಂಡು, ಪ್ರಪಂಚದ ಇತರೆಡೆಗಳಿಗಿಂತ ಭಿನ್ನವಾದ 'ಭಾರತೀಯತೆ'ಯೆಂಬುದರ ಪ್ರಾದುರ್ಭಾವವಾಯಿತು. ದೇವವಾಣಿಯೆಂದು ಹೆಸರಾದ ಸಂಸ್ಕೃತ, ಸುಸಂಸ್ಕೃತರಾದ ನಾಗರಿಕರ ಏಕೈಕ ಸಂವಹನ ಮಾಧ್ಯಮವಾಗಿತ್ತು. ಇದರಲ್ಲಿ ಪ್ರಬುದ್ಧರಾದ ಪ್ರಭಾವಶಾಲಿ ವ್ಯಕ್ತಿಗಳು ಅಸಂಖ್ಯಾತ ಜನಸಾಮಾನ್ಯರ ಜೀವನ ರೀತಿ, ಸಂಸ್ಕೃತಿ ಮತ್ತು ಚಿಂತನೆಗಳ ಮೇಲೆ ಹತೋಟಿಯನ್ನಿಟ್ಟುಕೊಂಡುದು, ತಮಗೆ ಬೇಕಾದಂತೆ ಅದನ್ನು ರೂಪಿಸಿದುದು ಪವಾಡಸದೃಶವಾಗಿದೆ. ಆ ಜನಸಾಮಾನ್ಯರ ಚಿಂತನೆಗಳೆಲ್ಲದರ ಮೇಲೆ ಈ ಶಿಷ್ಟತನದ ನೆರಳು ಒಂದು ರೀತಿಯಲ್ಲಿ ಆವರಿಸಿದರೂ, ಸಾಮಾನ್ಯ ಜನತೆಯ ಆಚಾರ–ವಿಚಾರಗಳು ಶಿಷ್ಟಕ್ಕಿಂತ ಭಿನ್ನವಾಗಿ ಇದರ ಜೊತೆಜೊತೆಯಾಗಿಯೇ ಇತ್ತೆಂಬುದೂ, ಅದೂ ಶಕ್ತಿಯುತವಾಗಿಯೂ ಇತ್ತೆಂಬುದು ನಿರ್ವಿವಾದ. ಮೊದಲು ತಳದಲ್ಲಿ ಇದ್ದ ಇದು, ಕಾಲಾಂತರದಲ್ಲಿ ಮೇಲೆ ತಲೆಯೆತ್ತಿ ಬೆಳೆದ ಪರಿಣಾಮವಾಗಿ, ಪ್ರಾದೇಶಿಕವಾಗಿ ಅನೇಕ ಭಾಷಾ ಪ್ರಭೇದಗಳು ಪ್ರಬಲವಾಗಿ, ಅವುಗಳಲ್ಲಿ ಸ್ವತಂತ್ರವಾಗಿ ಸಾಹಿತ್ಯ ರಚನೆಯಾಗಲಾರಂಭವಾಯಿತು. ಜೊತೆಗೆ ಧಾರ್ಮಿಕ ಕ್ರಾಂತಿಗಳೂ ಒದಗಿ, ಜೈನ–ಬೌದ್ಧ ಮುಂತಾದ ಜ್ಞಾನಿಗಳು ಜನಸಾಮಾನ್ಯರ ಭಾಷೆಯನ್ನೇ ಆಯ್ದುಕೊಂಡು ಅದರಲ್ಲಿ ಕೃತಿ ರಚನೆ ಮಾಡಲು ಆರಂಭಿಸಿದುದರ ಪರಿಣಾಮವಾಗಿ ದೇಶೀಯ ಸಾಹಿತ್ಯ ವೈವಿಧ್ಯಮಯವಾಗಿ, ಬಹುಮುಖವಾಗಿ ಬೆಳೆಯಲು ಸಾಧ್ಯವಾಯಿತು. ಆದರೆ ಕಾಲಕ್ಕೆ ತಕ್ಕಂತೆ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿಯೂ ಕೂಡ ಬದಲಾವಣೆಗಳಾಗತೊಡಗಿದವು. ವಿದೇಶೀ ಸಂಸ್ಕೃತಿಯ ಆಗಮನ ಭಾರತೀಯತ್ವದ ಮೇಲೆ ದೊಡ್ಡ ಆಘಾತವನ್ನುಂಟುಮಾಡಿತು. ಫಲಸ್ವರೂಪವಾಗಿ ನಾವು ನಮ್ಮ ತನವನ್ನೇ ಕಳೆದುಕೊಂಡು ನಾವು ಎತ್ತ ಹೋಗುತ್ತಿದ್ದೇವೆನ್ನುವುದು ನಮಗೇ ಅರ್ಥವಾಗದ ಸಂದಿಗ್ಧ ಸ್ಥಿತಿಗೆ ಬಂದು ತಲುಪಿದೆವು. ಇತ್ತ ದೇಶೀಯ ಪ್ರೀತಿಯನ್ನೂ ಬಿಡಲಾರದೆ, ಅತ್ತ ವಿದೇಶೀ ಮೋಹದಿಂದಲೂ ಹೊರಬರಲಾರದೆ ಒದ್ದಾಡುತ್ತಿದ್ದೇವೆ.

**ಪ್ರಶ್ನೆಗಳು :**

**I.ಭಾರತೀಯತೆಯ ಪ್ರಾದುರ್ಭಾವ ಹೇಗೆ ಉಂಟಾಯಿತು?**

A. ಭಾರತದ ಮೂಲ ನಿವಾಸಿಗಳೊಡನೆ ಸಮ್ಮಿಲನಗೊಂಡು

B. ಧಾರ್ಮಿಕ–ಸಾಂಸ್ಕೃತಿಕ ಅಂಗಗಳಲ್ಲಿ ಒಂದರೊಡನೊಂದು ಸಮ್ಮಿಲನಗೊಂಡು

C. ಭಾರತದ ಅತಿ ಪ್ರಾಚೀನತೆಯ ಕಾರಣದಿಂದಾಗಿ

D. ಆರ್ಯ ಜನಾಂಗ ಭಾರತದಲ್ಲಿ ಮೊದಲೇ ನೆಲೆಸಿದ್ದರಿಂದ.

**II.ಪ್ರಾಚೀನ ಕಾಲದಲ್ಲಿ ನಾಗರಿಕರೊಳಗೆ ಸಂವಹನ ಮಾಧ್ಯಮ ಯಾವುದಾಗಿತ್ತು?**

A. ಭಾರತೀಯತೆ

B. ಸಂಸ್ಕೃತ

C. ಸುಸಂಸ್ಕೃತತೆ

D. ಧಾರ್ಮಿಕತೆ–ಸಾಂಸ್ಕೃತಿಕತೆ

**III. ಯಾವುದನ್ನು ಪವಾಡ ಎಂದು ಲೇಖಕರು ಕರೆದಿದ್ದಾರೆ?**

A. ಜನರು ಸಂಸ್ಕೃತಿ ಮತ್ತು ಚಿಂತನೆಗಳ ಮೇಲೆ ಹತೋಟಿಯನ್ನಿಟ್ಟುಕೊಂಡುದು

B. ಭಾರತೀಯತೆಯೆಂಬುದರ ಪ್ರಾದುರ್ಭಾವ

C. ಶಿಷ್ಟತನದ ನೆರಳು

D. ಸಾಮಾನ್ಯ ಜನತೆಯ ಆಚಾರ–ವಿಚಾರಗಳು

**IV.ಭಾಷಾ ಪ್ರಭೇದಗಳು ಹುಟ್ಟಲು ಏನು ಕಾರಣ?**

A. ಸಂಸ್ಕೃತಿ ಮತ್ತು ಚಿಂತನೆ

B. ಧಾರ್ಮಿಕತೆ–ಸಾಂಸ್ಕೃತಿಕತೆ

C. ಜನಸಾಮಾನ್ಯರ ಚಿಂತನೆಗಳು

D. ಸಾಮಾನ್ಯ ಜನತೆಯ ಆಚಾರ–ವಿಚಾರಗಳು

**V.ದೇಶೀಯ ಸಾಹಿತ್ಯ ಹೇಗೆ ವೈವಿಧ್ಯಮಯವಾಯಿತು?**

A. ಜೈನ–ಬೌದ್ಧ ಜ್ಞಾನಿಗಳು ಜನಸಾಮಾನ್ಯರ ಭಾಷೆಯನ್ನೇ ಆಯ್ದುಕೊಂಡು ಅದರಲ್ಲಿ ಕೃತಿ ರಚನೆ ಮಾಡಲು ಆರಂಭಿಸಿದ್ದರಿಂದ

B. ಭಾಷಾ ಪ್ರಭೇದಗಳು ಪ್ರಬಲವಾಗಿದ್ದರಿಂದ

C. ಜನಸಾಮಾನ್ಯರ ಜೀವನ ರೀತಿ

D. ಪ್ರಬುದ್ಧರಾದ ಪ್ರಭಾವಶಾಲಿ ವ್ಯಕ್ತಿಗಳ ಕಾರಣದಿಂದಾಗಿ.

## Section - B

**ಅನ್ವಯಿಕ ವ್ಯಾಕರಣ (ಬಹು ಅಯ್ಕೆಯ ಪ್ರಶ್ನೆಗಳು,ಛಂದಸ್ಸು,ಗಾದೆಮಾತು,ವಾಕ್ಯಪರಿವರ್ತನೆ) – 16 ಅಂಕಗಳು**

**ಪ್ರಶ್ನೆ 3. ಕೆಳಗೆ ವ್ಯಾಕರಣಾಂಶಗಳ ಬಹುಆಯ್ಕೆಯ 10 ಪ್ರಶ್ನೆಗಳಿವೆ. ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿರಿ.** 10 **X 1 = 10**

**I.ಕೆಳಗಿನ ಪದದ ಸಂಧಿ ಹೆಸರಿಸಿರಿ** *

ಸೂರ್ಯೋದಯ

A. ವೃದ್ಧಿ ಸಂಧಿ

B. ಸವರ್ಣದೀರ್ಘ ಸಂಧಿ

C. ಗುಣ ಸಂಧಿ

D. ಆದೇಶ ಸಂಧಿ

**II. ಕೆಳಗಿನ ಪದದ ಸಮಾಸ ಹೆಸರಿಸಿರಿ** *

ಪದ್ಮನಾಭ

A. ಕ್ರಿಯಾ ಸಮಾಸ

B. ತತ್ಪುರುಷ ಸಮಾಸ

C. ದ್ವಂದ್ವ ಸಮಾಸ

D ಬಹುವ್ರೀಹಿ ಸಮಾಸ

**III. ಕೆಳಗಿನ ಪದದ ಗ್ರಾಂಥಿಕ ರೂಪ ಬರೆಯಿರಿ.** *

ನಿನ್ನ್ಯಾರ

A.ನಿನ್ನ ಯಾರ

B.ನಿನ್ನನ್ನು ಯಾರೂ

C.ನೀನು ಯಾರ

D.ನೀನು ಯಾರಿಗೂ

**IV.ಕೆಳಗಿನ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿ.** *

ಕುಮಾರನು ಓಟದ ಪಂದ್ಯದಲ್ಲಿ ಓಡುತ್ತಿದ್ದಾನೆ.

A. ಕುಮಾರನು ಓಟದ ಪಂದ್ಯದಲ್ಲಿ ಓಡಬಹುದು.

B. ಕುಮಾರನು ಓಟದ ಪಂದ್ಯದಲ್ಲಿ ಓಡುವನು.

C. ಕುಮಾರನು ಓಟದ ಪಂದ್ಯದಲ್ಲಿ ಓಡುವನೇನೊ.

D. ಕುಮಾರನು ಓಟದ ಪಂದ್ಯದಲ್ಲಿ ಓಡಿದನು.

**V.ಕೆಳಗಿನ ವಾಕ್ಯದಲ್ಲಿರುವ ಕ್ರಿಯಾಪದದ ಧಾತುವನ್ನು ತಿಳಿಸಿ.** *

ನಮ್ಮ ದೇಹವನ್ನು ಹಿಡಿದಿಡಬಹುದಾದರೂ ಮನಸ್ಸನ್ನು ಕಟ್ಟಿಹಾಕಲಾಗುವುದಿಲ್ಲ.

A. ದೇಹ, ಮನಸ್ಸು

B. ನಮ್ಮ, ಮನಸ್ಸು

C. ದೇಹ, ಹಿಡಿ

D. ಹಿಡಿ, ಕಟ್ಟು.

**VI. ಕೆಳಗಿನ ಪದ ಬಿಡಿಸಿ ಬರೆಯಿರಿ.** *

ಆರಿಗುಸುರುವೆನಾರ

A.ಆರಿಗೆ+ಸುರುವೆನಾರ

B.ಆರಿಗೆ+ಉಸುರುವೆನು+ಆರ

C.ಉಸುರುವೆನು+ಆರಿಗೆ

D.ಆರ್+ಆರಿಗೆ+ಉಸುರುವೆನ್.

**VII. ಕೆಳಗಿನ ಪದದ ವಿಭಕ್ತಿ ಪ್ರತ್ಯಯ ಹೆಸರಿಸಿ.** *

ರಾಮನೊಳ್

A.ಪ್ರಥಮಾ ವಿಭಕ್ತಿ ಪ್ರತ್ಯಯ

B.ಪಂಚಮಿ ವಿಭಕ್ತಿ ಪ್ರತ್ಯಯ

C.ಷಷ್ಠೀ ವಿಭಕ್ತಿ ಪ್ರತ್ಯಯ

D.ಸಪ್ತಮೀ ವಿಭಕ್ತಿ ಪ್ರತ್ಯಯ

**VIII. ಕೆಳಗಿನ ಪದದ ತತ್ಸಮ ತದ್ಭವ ರೂಪ ಬರೆಯಿರಿ.** *

ಯೋಗಿ

A.ಭೋಗಿ

B.ಬೈರಾಗಿ

C.ಜೋಗಿ

D.ಸಾಗಿ.

**IX.ಕೆಳಗಿನ ಪದದ ಸಮಾನಾರ್ಥಕ ಪದಗಳನ್ನು ಬರೆಯಿರಿ.** *

ಸಲಿಲ

A.ಸಾಲ, ಜಟಿಲ

B.ನೀರು, ಜಲ

C.ಉದಕ, ಪಾನಕ

D.ಕಮಲ, ಅನಿಲ.

X **ಕೆಳಗಿನ ಪದದ ಅನೇಕಾರ್ಥಗಳನ್ನು ಬರೆಯಿರಿ.** *

ಬಗೆ

A.ಕ್ರಮ, ರೀತಿ

B.ಯೋಚನೆ, ಯೋಜನೆ

C.ದ್ರೋಹ, ಬೇರೆಬೇರೆ

D.ರೀತಿ, ಮನಸ್ಸು.

**4. ಕೆಳಗಿನ ಪ್ರಶ್ನೆಗಳಿಗೆ ಕೆಳಗೆ ಕೊಟ್ಟಿರುವ ಸೂಚನೆಯಂತೆ ಉತ್ತರಿಸಿ**

**I. ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ,ಗಣವಿಂಡಿಸಿ ಛಂದಸ್ಸನ್ನು ಹೆಸರಿಸಿ.** * 2

ಕದಡಿದ ಸಲಿಲಂ ತಿಳಿವಂ
ದದೆ ತನ್ನಿಂ ತಾನೆ ತಿಳಿದ ದಶವದನಂಗಾ

**II. ಕೆಳಗಿನ ಯಾವುದಾದರೂ ಒಂದು ಗಾದೆಮಾತನ್ನು ವಿಸ್ತರಿಸಿ ಬರೆಯಿರಿ.** * 2

1. ಅಟ್ಟಕ್ಕೆ ನೆಗೆದು ಆಗಸಕೆ ನೆಗೆ.
2. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ?

**III. ಕೆಳಗಿನ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಬದಲಿಸಿರಿ.** * 1

ರಾಮನು ಹಣ್ಣನ್ನು ತಿಂದನು

**IV. ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ.** * 1

ರಾಮನು ಪೇಟೆಗೆ ಹೋದನು.

## Section - C

**ವಾಚನ ಮತ್ತು ಗ್ರಹಿಕಾ ಕೌಶಲ : ಪರಿಚಿತ ಪದ್ಯ ,ಗದ್ಯ, ದೀರ್ಘಗದ್ಯ : 14 ಅಂಕಗಳು**

**ಪ್ರಶ್ನೆ 5. ಕೆಳಗಿನ ಪದ್ಯಭಾಗ ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.** **5 x 1 = 5**

ದನಗಳಿಗೆ ಮೇವಿಲ್ಲ
ಜನಗಳಿಗೆ ನೀರಿಲ್ಲ
ಗಂಜಿಗೂ ಗತಿಯಿಲ್ಲ,
ನನ್ನವರು
ಸತ್ತ ದನಗಳ ಕಿತ್ತು ತಿನ್ನುವುದನ್ನು
ಕಣ್ಣಾರೆ ಕಾಣುತ್ತ
ಕತಕತನೆ ಕುದಿವ ಅಗ್ನಿ ಪರ್ವತವಾಗಿದ್ದೇನೆ.
ಏನೂ ಮಾಡಲಾಗದೆ
ಅವರ ಸ್ಥಿತಿ ನೋಡಲಾಗದೆ
ಅವರಿಗಾಗಿ
ಮುಗಿಲತ್ತ ಕೈಚಾಚಿ ನಿಂತಿದ್ದೇನೆ,
ಧಗಧಗಿಸಿ ಉರಿವ ಜ್ವಾಲಾಮುಖಿಯಾಗಿದ್ದೇನೆ.
ನನ್ನವರಿಗಾಗಿ
ನಾನೆಂದೂ ನಂಬಿರದ ದೇವರಲ್ಲಿ ಮೊರೆಯಿಡುತ್ತೇನೆ,
ಕಂಡೇ ಇರದ ದೈವದ ಸಹಾಯ ಬೇಡುತ್ತೇನೆ.
ಯಾರೂ ನನ್ನವರ ಕೈ ಹಿಡಿಯದಾದಾಗ
ನನ್ನ ಕಂಬನಿಯ ಲಾವಾರಸದಲ್ಲಿ
ವಿಶ್ವವನ್ನೇ ಮುಳುಗಿಸಿಬಿಡುವ
ಛಲ ಮೂಡುತ್ತದೆ.
ಬೆಂಕಿ ನಾಲಗೆ ಚಾಚಿ ನನ್ನವರ ದಾರಿದ್ರ್ಯವನ್ನೇ
ಆಪೋಶನ ಮಾಡುತ್ತೇನೆ.
ಅವರ ದೀನ
ದಲಿತತನಕ್ಕೆ ಧಿಕ್ಕಾರವಿರಲಿ!
ಅವರ ನೋವನ್ನೇ
ಸರ್ವನಾಶ ಮಾಡುತ್ತೇನೆ.
ಆಕಾಶದಲ್ಲಿ
ಕಾರ್ಮೋಡ ಕವಿಸುವ ನಗು
ಮಳೆ ಸುರಿಸುವ ನಗು
ಹೊಳೆ ಸುರಿಸುವ ನಗು
ಬೆಳೆ ಬೆಳೆಸುವ ನಗು
ದನ, ಜನ ಎಲ್ಲ ಕೂಡಿ
ನಗುತ್ತೇವೆ
ಒಮ್ಮೆ ನಕ್ಕೇ ನಗುತ್ತೇವೆ.

**ಪ್ರಶ್ನೆಗಳು :**

**I. ಕವಯಿತ್ರಿ ಏನನ್ನು ಕಾಣುತ್ತಿದ್ದಾರೆ?**

A. ದನಗಳಿಗೆ ಮೇವಿಲ್ಲ

B. ಜನಗಳಿಗೆ ನೀರಿಲ್ಲ

C. ಗಂಜಿಗೂ ಗತಿಯಿಲ್ಲ,

D. ಸತ್ತ ದನಗಳ ಕಿತ್ತು ತಿನ್ನುವುದನ್ನು.

**II. ಜನ, ದನಗಳಿಗೆ ಏನಿಲ್ಲ?**

A. ಜನಗಳಿಗೆ ನೀರಿಲ್ಲ

B. ದನಗಳಿಗೆ ಮೇವಿಲ್ಲ

C. ಗಂಜಿಗೂ ಗತಿಯಿಲ್ಲ,

D. ಜನ, ದನಗಳಿಗೆ ನೀರು, ಮೇವಿಲ್ಲ.

**III. ಕವಯಿತ್ರಿ ಮುಗಿಲತ್ತ ಕೈಚಾಚಿದ್ದೇಕೆ?**

A. ಏನೂ ಮಾಡಲಾಗದೆ

B. ಅವರ ಸ್ಥಿತಿ ನೋಡಲಾಗದೆ

C. ಅವರ ಸ್ಥಿತಿ ನೋಡಲಾಗದೆ, ಏನೂ ಮಾಡಲಾಗದೆ

D. ಹೇಗಾದರೂ ಮಳೆ ಬಂದರೆ ಸಾಕೆಂದು.

**IV. ಕವಯಿತ್ರಿಯಲ್ಲಿ ಎಂತಹ ಛಲ ಮೂಡುತ್ತದೆ?**

A. ದೈವದ ಸಹಾಯ ಬೇಡುವ

B. ಅವರ ದೀನ, ದಲಿತತನಕ್ಕೆ ಧಿಕ್ಕಾರ ಹಾಕುವ

C. ತಮ್ಮ ಕಂಬನಿಯ ಲಾವಾರಸದಲ್ಲಿ ವಿಶ್ವವನ್ನೇ ಮುಳುಗಿಸಿ ಬಿಡುವ

D ಅವರ ನೋವನ್ನೇ ಸರ್ವನಾಶ ಮಾಡಿಬಿಡುವ.

**V.** ಸತ್ತ ದನಗಳ ಕಿತ್ತು ತಿನ್ನುವುದನ್ನು ಕಣ್ಣಾರೆ ಕಾಣುತ್ತ ಲೇಖಕಿ _______ ಪರ್ವತವಾಗಿದ್ದೇನೆ ಎಂದಿರುವರು

A. ಹಿಮ

B. ಅಗ್ನಿ

C. ಬೆಂಕಿ

D. ಹಸಿರು

**ಪ್ರಶ್ನೆ 6. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ. 5 x 1 = 5**

ಈಚಿನ ವರ್ಷಗಳಲ್ಲಿ ಕನ್ನಡಿಗರು ತಮ್ಮ ರಾಜ್ಯದಲ್ಲಿ ತಾವೇ ತಬ್ಬಲಿಗಳಾಗುತ್ತಿರುವುದನ್ನು ಅನುಭವಕ್ಕೆ ತೆಗೆದುಕೊಂಡಿದ್ದಾರೆ. ಉದ್ಯೋಗದ ಸಮಸ್ಯೆ ತೀವ್ರತರವಾಗಿದೆ. ರಾಜ್ಯದಲ್ಲಿ ಸ್ಥಾಪಿತವಾಗುವ ಕೇಂದ್ರ ಉದ್ಯಮಗಳಲ್ಲಿ ಕನ್ನಡಿಗರಿಗೆ ದೊರೆಯಬೇಕಾದ ಪಾಲು ದೊರೆಯುವುದಿಲ್ಲ. ಒಂದು ಹಂತದವರೆಗಿನ ನೇಮಕಾತಿಯಲ್ಲಿ ಸ್ಥಳೀಯರನ್ನೇ ಪರಿಗಣಿಸಬೇಕಾದ ಅಗತ್ಯವಿದ್ದರೂ ಇಲ್ಲಿ ಹಾಗಾಗುತ್ತಿಲ್ಲ. ಆ ಪ್ರದೇಶದ ಜನರಿಗೇ ಉದ್ಯೋಗಾವಕಾಶಗಳು ದೊರೆಯದಿದ್ದರೆ ಅಲ್ಲಿ ಉದ್ಯೋಗಗಳು ಆರಂಭಗೊಳ್ಳುವ ಉದ್ದೇಶವೇನು? ಉಪಯೋಗವೇನು? ರಾಜ್ಯ ಸರ್ಕಾರದ ನೌಕರಿಗಳನ್ನು ಮತ್ತು ರಾಜ್ಯ ಸರ್ಕಾರದ ಉದ್ಯಮಗಳನ್ನು ನೆರೆಹೊರೆಯವರು ಆಕ್ರಮಿಸಿಕೊಂಡು ಬಿಡುತ್ತಾರೆ. ಅಲ್ಲಿಯೂ ಕನ್ನಡಿಗರಿಗೆ ಅವಕಾಶಗಳಿಲ್ಲ. ಇದರಿಂದ ಕನ್ನಡಿಗರು ಉದ್ಯೋಗದ ವಿಷಯದಲ್ಲಿ ಭೀತಿಗೊಂಡಿರುವುದು ಸಹಜ. ಕನ್ನಡಿಗರ ಆತ್ಮಹತ್ಯಾಕಾರಿಯಾದ ಔದಾರ್ಯ ಧೋರಣೆಯಿಂದ ಈಗಾಗಲೇ ಬೆಂಗಳೂರೂ ಸೇರಿದಂತೆ ಕರ್ನಾಟಕದ ಅನೇಕ ಕಡೆ ಕನ್ನಡಿಗರು ಅಲ್ಪಸಂಖ್ಯಾತರಾಗುತ್ತಿದ್ದಾರೆ. ಭಾಷಾ ಅಲ್ಪಸಂಖ್ಯಾತರ ಹೆಸರಿನಲ್ಲಿ ಇತ್ತೀಚೆಗೆ ಬೆಂಗಳೂರು ಕೇಂದ್ರಾಡಳಿತ ನಗರವಾಗಬೇಕೆಂಬ ಅಪಸ್ವರವನ್ನೂ ಕೇಳಿದ್ದೇವೆ. ಕನ್ನಡಿಗರು ಕನ್ನಡ ನಾಡಿನಲ್ಲಿಯೇ ತಬ್ಬಲಿಗಳಾದರೆ ಅವರಿಗೆ ಆಶ್ರಯವೆಲ್ಲಿದೆ? ಕನ್ನಡಿಗರ ಸಂಕಷ್ಟಗಳಿಗೂ ಒಂದು ಮಿತಿಯಿದೆ. ಅವರ ತಾಳ್ಮೆಗೆ ತಪ್ಪು ಅರ್ಥ ಹಚ್ಚಬಾರದು. ಬದುಕು ಭಾಷೆಗಿಂತ ದೊಡ್ಡದು ಎಂದು ಹೇಳಿದ್ದಾರೆ. ಆದರೆ ಭಾಷೆಯನ್ನು ಬಿಟ್ಟು ಬದುಕು ಇರುವುದಿಲ್ಲ ಎಂಬುದನ್ನು ನಾವು ಮರೆಯಬಾರದು.

**ಪ್ರಶ್ನೆಗಳು :**

**I.ಬದುಕು ಯಾವುದನ್ನು ಬಿಟ್ಟು ಇರುವುದಿಲ್ಲ?**

A. ಸಂಕಷ್ಟಗಳನ್ನು

B. ನಮ್ಮ ನಾಡನ್ನು

C. ಭಾಷೆಯನ್ನು

D. ಬದುಕುವವರನ್ನು

**II.ನಾವು ಯಾವ ಅಪಸ್ವರವನ್ನು ಕೇಳಿದ್ದೇವೆ?** *

A. ಸಂಕಷ್ಟಗಳಿಗೂ ಒಂದು ಮಿತಿಯಿದೆ

B. ಕನ್ನಡಿಗರಿಗೆ ಉದ್ಯೋಗಾವಕಾಶಗಳು ದೊರೆಯುತ್ತಿಲ್ಲ

C. ಬೆಂಗಳೂರು ಕೇಂದ್ರಾಡಳಿತ ನಗರವಾಗಬೇಕು

D ತಾಳ್ಮೆಗೆ ತಪ್ಪು ಅರ್ಥ ಹಚ್ಚಬಾರದು

**III.ನೆರೆಹೊರೆಯವರು ಏನನ್ನು ಆಕ್ರಮಿಸಿಕೊಂಡು ಬಿಡುತ್ತಾರೆ?**

A. ಕನ್ನಡ ನಾಡನ್ನು

B. ರಾಜ್ಯ ಸರ್ಕಾರದ ನೌಕರಿಗಳನ್ನು ಮತ್ತು ರಾಜ್ಯ ಸರ್ಕಾರದ ಉದ್ಯಮಗಳನ್ನು

C. ಪರರು ನಮ್ಮ ಭಾಷೆಯನ್ನು

D. ಕನ್ನಡಿಗರಿಗೆ ದೊರೆಯಬೇಕಾದ ಪಾಲು

**IV.ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯವೇನು?** *

A. ಕನ್ನಡ ನಾಡಿನಲ್ಲಿ ಕನ್ನಡಿಗರಿಗೇ ಉದ್ಯೋಗ ಸಿಗುತ್ತಿಲ್ಲ

B. ರಾಜ್ಯದಲ್ಲಿ ಸ್ಥಾಪಿತವಾಗುವ ಕೇಂದ್ರ ಉದ್ಯಮಗಳಲ್ಲಿ ಕನ್ನಡಿಗರಿಗೆ ದೊರೆಯಬೇಕಾದ ಪಾಲು ದೊರೆಯುವುದಿಲ್ಲ.

C. ನಮ್ಮ ನೆಲ, ಉದ್ಯಮಗಳನ್ನು ನೆರೆಹೊರೆಯವರು ಆಕ್ರಮಿಸಿಕೊಳ್ಳುತ್ತಿರುವುದು

D. ಉದ್ಯೋಗಾವಕಾಶಗಳು ದೊರೆಯುತ್ತಿಲ್ಲ

**V.ಕನ್ನಡಿಗರು ಅಲ್ಪಸಂಖ್ಯಾತರಾಗಲು ಕಾರಣವೇನು?**

A. ಕನ್ನಡಿಗರ ಸಂಖ್ಯೆ ಕಡಿಮೆಯಾಗುತ್ತಿದೆ

B. ಪರಭಾಷಿಕರು ಹೆಚ್ಚಾಗುತ್ತಿದ್ದಾರೆ

C. ಕನ್ನಡಿಗರ ಔದಾರ್ಯ ಧೋರಣೆ

D. ಕನ್ನಡಿಗರ ಉದಾಸೀನ ಧೋರಣೆ.

**ಪ್ರಶ್ನೆ 7. ಕೆಳಗಿನ ಗದ್ಯಭಾಗ ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಬಹುಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿರಿ.** **4 x 1 = 4**

ಹಳೆಕೊಪ್ಪದ ಸುಬ್ಬಣ್ಣನ ಮನೆಯ ಹಿತ್ತಿಲಲ್ಲಿ ಒಂದು ವಿಚಿತ್ರ ವಿದ್ಯಮಾನ ಜರುಗಿತು. ಮೂಡಿಗೆರೆಗೂ ಅದರ ಹಿನ್ನೆಲೆಯಲ್ಲಿರುವ ಮನ್ನಾಜಂಗ್ಲಿಗೂ ನಡುವೆ ಹಳೆಕೊಪ್ಪ ಬರುತ್ತದೆ. ತೋಟದ ಮನೆಯಲ್ಲಿ ಮಲಗಿದ್ದ ಸುಬ್ಬಣ್ಣನಿಗೆ ಮನೆಯ ಹಿತ್ತಲಲ್ಲಿ ಇದ್ದಕ್ಕಿದ್ದಂತೆ ಅನೇಕ ನಾಯಿಗಳು ಬೊಗಳುವುದು ಕೇಳಿಸಿತು. ಇಷ್ಟೊಂದು ನಾಯಿಗಳು ಎಲ್ಲಿಂದ ತನ್ನ ಮನೆಯ ಹಿತ್ತಲಿಗೆ ಬಂದವು ಎಂದು ಅಚ್ಚರಿಪಡುತ್ತ ಏನು ಗಲಾಟೆ ನೋಡಲು ಸುಬ್ಬಣ್ಣ ಲಾಟೀನು ಹಿಡಿದು ಹೊರಬಂದ. ಕೊಟ್ಟಿಗೆ ಬಳಿ ಗಲಭೆ ಮಾಡುತ್ತಿದ್ದ ನಾಯಿಗಳನ್ನು ಓಡಿಸಲು ಹಚಾ ಎಂದು ಕೂಗುತ್ತ ಸುಬ್ಬಣ್ಣ ಅತ್ತ ಸಾಗುತ್ತಲೂ ಕೊಟ್ಟಿಗೆ ಕಂಬಗಳು ಲಟಲಟ ಮುರಿದದ್ದೂ ಎಂಥದೋ ಕತ್ತಲಲ್ಲಿ ಧಡಧಡ ನಡೆದ ಸದ್ದೂ ಅದರ ಹಿಂದೆಯೇ ನಾಯಿಗಳ ದಂಡು ಬೊಗಳಿಕೊಂಡು ಓಡಿದ್ದೂ ಕೇಳಿಸಿತು. ಗಾಬರಿಯಿಂದ ನೋಡುತ್ತಿದ್ದ ಸುಬ್ಬಣ್ಣನ ಕಣ್ಣೆದುರೇ ಇಡೀ ಕೊಟ್ಟಿಗೆಯ ಮಾಡು ದೊಪ್ಪನೆ ಕುಸಿದು ಬಿತ್ತು. ಕೊಟ್ಟಿಗೆಯೊಳಗಿದ್ದ ಹಲವಾರು ಮೇಕೆಗಳು ಅರಚಲು ಶುರುಮಾಡಿದವು. ಅಕ್ಕಪಕ್ಕದ ಮನೆಯವರೂ ಆಳುಗಳೂ ಸೇರಿ ಕುಸಿದು ಬಿದ್ದಿದ್ದ ಮೇಕೆಗಳನ್ನು ಹೊರತೆಗೆಯುವುದರೊಳಗೆ ಕೆಲವು ಸತ್ತೇಹೋದವು.

ಕೊಟ್ಟಿಗೆಯನ್ನೇ ಉರುಳಿಸಿ ಓಡಿ ಹೋಗಬೇಕಾದರೆ ಇದು ಆನೆಯಂಥ ಪ್ರಾಣಿಗೆ ಮಾತ್ರ ಸಾಧ್ಯ ಎಂದು ಊಹಿಸಿದ ಅವರು ಮೇಕೆಯ ಮೇವನ್ನು ಕದ್ದಿರಬೇಕಾದರೆ ಇದು ಕೃಷ್ಣೇಗೌಡರ ಆನೆಯೇ ಸರಿ ಎಂದು ನಿರ್ಧರಿಸಿ ಸತ್ತ ಮೇಕೆಗಳನ್ನು ಎದುರಿಗಿಟ್ಟುಕೊಂಡು ಕೃಷ್ಣೇಗೌಡರ ಆನೆಗೆ ಬಗೆಬಗೆಯಾಗಿ ನಿಂದಿಸತೊಡಗಿದರು. ''ಇನ್ನೊಂದು ಸಾರಿ ಅದು ಇತ್ತಲಾಗಿ ಮುಖ ಹಾಕಲಿ, ಅದನ್ನು ಕೋವೀಲೆ ಹೊಡೀತೀನಿ'' ಎಂದು ಸುಬ್ಬಣ್ಣ ಅಲ್ಲಿ ಅನುಕಂಪ ಸೂಚಿಸುತ್ತ ನಿಂತಿದ್ದ ಅಕ್ಕಪಕ್ಕದ ಮನೆಯ ಪ್ರೇಕ್ಷಕರೆದುರು ಕೂಗಾಡಿದ.

**ಪ್ರಶ್ನೆಗಳು :**

**I.ವಿಚಿತ್ರ ವಿದ್ಯಮಾನಗಳು ಎಲ್ಲಿ ನಡೆದವು?**

A. ಹಳೆಕೊಪ್ಪದಲ್ಲಿ

B. ಸುಬ್ಬಣ್ಣನ ಮನೆಯಲ್ಲಿ

C. ಸುಬ್ಬಣ್ಣನ ಮನೆಯ ಹಿತ್ತಿಲಲ್ಲಿ

D. ಕೊಟ್ಟಿಗೆಯಲ್ಲಿ

**II.ಕೊಟ್ಟಿಗೆಯನ್ನು ಬೀಳಿಸಿದ್ದು ಯಾರು?**

A. ನಾಯಿಗಳು

B. ಮೇಕೆಗಳು

C. ಜನರು

D. ಕೃಷ್ಣೇಗೌಡರ ಆನೆ

**III.ವಿಚಿತ್ರ ವಿದ್ಯಮಾನ ಯಾವುದು?**

A. ನಾಯಿಗಳು ಬೊಗಳುವುದು

B. ಕೊಟ್ಟಿಗೆಯ ಮಾಡು ಕುಸಿದು ಬಿದ್ದಿದ್ದು

C. ಮೇಕೆಗಳು ಅರಚಿದ್ದು

D. ಕೆಲ ಮೇಕೆಗಳು ಸತ್ತಿದ್ದು

**IV.ಮೇಕೆಗಳು ಏಕೆ ಅರಚಲು ಶುರುಮಾಡಿದವು?**

A. ನಾಯಿಗಳು ಬೊಗಳಿದ್ದರಿಂದ

B. ಸುಬ್ಬಣ್ಣ ಬಂದಿದ್ದರಿಂದ

C. ಆನೆ ಬಂದಿದ್ದರಿಂದ

D. ಕೊಟ್ಟಿಗೆಯ ಮಾಡು ಕುಸಿದು ಬಿದ್ದಿದ್ದರಿಂದ

# PART B Section D

## ಪದ್ಯಗಳ ಅಧ್ಯಯನ,ಕವಿ ಪರಿಚಯ ಮತ್ತುಸೃಜನಾತ್ಮಕ ಬರವಣಿಗೆ : 40 ಅಂಕಗಳು

**ಪ್ರಶ್ನೆ 8. ಕೆಳಗಿನವುಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.** 3 x 2 = 06

I. ಮುದ್ದಣನನ್ನು ಮನೋರಮೆ ಹೇಗೆ ಉಪಚರಿಸಿದಳು?

II. ದುರ್ಜನರ ಕಾರ್ಯ ಯಾವ ಬಗೆಯದು? *

III. ಮಠದವರಿಗೆ ಆನೆಗಿಂತ ವೇಲಾಯುಧನನ್ನು ಸಾಕಲು ತ್ರಾಸಾದುದೇಕೆ?

**ಪ್ರಶ್ನೆ 9. ಕೆಳಗಿನ ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ.** 3 x 3 = 09

I. 'ಅದೃಷ್ಟವನ್ನೇ' ಅವಲಂಬಿಸಿ ಬದುಕಲು ಸಾಧ್ಯವೇ? *

II.. ಮರ್ಕಟನ ಕೈಯಲ್ಲಿ ಮಾಣಿಕ್ಯವಿದ್ದು ಫಲವೇನು?

**ಅಥವಾ**

"ಮಾತೇ ಮರೆತುಹೋಗಿದೆ ಕಣೆ".

III."ಕಲಿ ಭೀಮನೇ ಮಿಡುಕುಳ್ಳ ಗಂಡನು"

**ಪ್ರಶ್ನೆ 10. ಕೆಳಗಿನ ಕವಿ/ಲೇಖಕರಲ್ಲಿ ಯಾರಾದರೂ ಒಬ್ಬರ ಬಗ್ಗೆ ಆರೇಳು ವಾಕ್ಯಗಳಲ್ಲಿ ಬರೆಯಿರಿ.** 1 x 3 = 03

1. ಪುಲಿಗೆರೆ ಸೋಮನಾಥ 2. ಮುದ್ದಣ 3. ಡಾ. ಹಾ.ಮಾ. ನಾಯಕ.

**ಪ್ರಶ್ನೆ 11. ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.** 3 x 4 = 12

I. ಬೆಳ್ಳಿಲೋಟ ಕಂಡಾಗ ಧಣಿಯಲ್ಲಿ ಆತಂಕ, ಗಾಬರಿ, ಭಯ ಉಂಟಾಗಲು ಕಾರಣವೇನು?

**ಅಥವಾ**

ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ. ಹೇಗೆ? ವಿವರಿಸಿರಿ.

**II.** ಯಾವ-ಯಾವ ಸಂಗತಿಗಳನ್ನು ಉಪೇಕ್ಷಿಸಬಾರದಾಗಿ ಸೋಮನಾಥನು ತಿಳಿಸಿದ್ದಾನೆ? *

**ಅಥವಾ**

ಶಿಲುಬೆಗೇರಿದ ಜೀಸಸ್‌ನ ದೇಹ ಏನನ್ನು ಹೇಳುವಂತಿದೆ? ವಿವರಿಸಿ.

**III.** ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ.

**ಅಥವಾ**

ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು?

**ಪ್ರಶ್ನೆ 12. ಕೆಳಗಿನವುಗಳಲ್ಲಿ ಯಾವುದಾದರೂ ಒಂದು ವಿಷಯದ ಬಗ್ಗೆ 150-200 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.** 5 x 1 = 5

I. ತ್ಯಾಜ್ಯ ವಸ್ತುಗಳ ಪುನರ್ಬಳಕೆ

II. ಕೊರೊನಾ ತಡೆಗಟ್ಟುವಲ್ಲಿ ಯುವಜನತೆಯ ಪಾತ್ರ

III. ರಾಷ್ಟ್ರೀಯ ಭಾವೈಕ್ಯತೆ.

**ಪ್ರಶ್ನೆ 13. ನಿಮ್ಮ ವಿದ್ಯಾಲಯದಲ್ಲಿ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಆಚರಿಸಿದ ಕಾರ್ಯಕ್ರಮದ ಬಗ್ಗೆ ವಿವರಿಸುತ್ತಾ ಪತ್ರಿಕಾ ಸಂಪಾದಕರಿಗೆ ಪತ್ರ ಬರೆಯಿರಿ** 5 x 1 = 5

**ಅಥವಾ**

**ನಿಮ್ಮ ಊರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸಲು ಕೋರಿ ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಗೆ ಪತ್ರವೊಂದನ್ನು ಬರೆಯಿರಿ.** *